'ನಮ್ಮ ಅದೃಷ್ಟ. ಅವಳು ಬಂದ ಹಾಗಿತ್ತು.'

'ಬಿಳಿ ಸೀರೆಯಲ್ಲಿ... ಎಡಬದಿಯಲ್ಲಿ... ಅವಳೇ ಅಲ್ವ?'

'ನಾನೂ ಸರೀ ನೋಡಿದ್ದೆ.'

'ಯಾರು?' ಎಂದೆ.

'ಅವಳೇ ಇರಬೇಕು. ಪೆರಿನಾಝ್. ಪೆರಿನಾಝ್ ವಾಡಿಯಾ.'

'ಅವಳಿಗೆ ಖುಶಿಯಾದರೆ ಒಂದೆರಡು ಡ್ರೆಸ್ ಅಲ್ಲವಂತೆ. ನೂರಿನ್ನೂರು... ಹಾಗಂತ ಕೇಳಿದ್ದೇನೆ!'

ವಿಷಯ ಕೇಳಿದವರೆಲ್ಲ, 'ಹೌದೇ? ಬಂದಿದ್ದಳೇ?' ಎಂದು ಕಣ್ಣರಳಿಸುವವರೇ.

'ಅವಳು ಬಂದರೂ ಯಾರಿಗೆ ಗೊತ್ತಾಗಬೇಕು? ತಲೆಯ ಮೇಲೆ ಸೆರಗು ಸುತ್ತಿ, ಮುಖ ಮುಚ್ಚುವಂಥ ಕಪ್ಪುಕನ್ನಡಕ ಧರಿಸಿದರೆ...?' ಎಂದು ಮೆನೇಜರ್ ಛಾಯಾ ಸೇಥಿ ಹುಬ್ಬು ಮೇಲೆ ಮಾಡಿದಳು.

'ಮುಖ ಮುಚ್ಚಿಕೊಳ್ಳುವುದೇ?' ತನ್ನನ್ನು ಯಾರಾದರೂ ಗುರುತಿಸುವುದು ಅವಳಿಗೆ ಇಷ್ಟವಿಲ್ಲವಂತೆ. ಅವಳು ಮದುವೆಯೇ ಮಾಡಿಕೊಂಡಿರಲಿಲ್ಲವಂತೆ.... ಒಬ್ಬೊಬ್ಬರು ಒಂದೊಂದು ಸುದ್ದಿ ಕೊಡುತ್ತಿದ್ದರು. ಹೀಗೆ ಮದುವೆಯಾಗದೆ ಇರುವುದು ಫಾರ್ಸಿಗಳಲ್ಲಿ ಸಾಮಾನ್ಯವಾದರೂ, ಅಷ್ಟೊಂದು ಶ್ರೀಮಂತೆಯಾದ ಅವಳು ಪ್ರೇಮ, ಪ್ರಣಯ ಅಥವಾ ಬೇರಾವುದೇ ಸಂಬಂಧಗಳಲ್ಲೂ ಸಿಲುಕಿಕೊಳ್ಳದೆ ಒಂಟಿಯಾಗಿ ಇದ್ದುದೆಂದರೆ ತುಸು ವಿಚಿತ್ರವೇ ಎಂದು ಮಾತಾಡಿಕೊಳ್ಳುವುದೂ ಕಿವಿಗೆ ಬಿತ್ತು.

ಪೆರಿನಾಝ್ ವಾಡಿಯಾಳು 'ಶಿಪ್ಪಿಂಗ್ ಮಾಗ್ನೇಟ್' ಎಂದು ದೊಡ್ಡ ಹೆಸರು ಮಾಡಿದ್ದ ರುಸ್ತುಂ ವಾಡಿಯಾರ ಮಗಳು. ತೀರ ತೀರ ಖಾಸಗಿ ವ್ಯಕ್ತಿ. ಏಕಾಂತವಾಸಿ. ಯಾರನ್ನೂ ಭೇಟಿಯಾಗದೆ ತಾನಾಯಿತು ತನ್ನ ಮನೆಯಾಯಿತು ಎಂದಿದ್ದವಳು ಫಾಶನ್ ಶೋಗೆ ಬಂದದ್ದು ಸುದ್ದಿಯಾಗಿತ್ತು. ಆದರೆ, ಸುದ್ದಿಯ ಬಗೆಗಿನ ಖಚಿತತೆ ತಿಳಿದುದು ಮುಂದೆ ವಾರ ಕಳೆದ ಮೇಲೆಯೇ.

ಹೊಸದಾಗಿ ಆರಂಭಿಸಿದ್ದ ಔಟ್‌ಲೆಟ್ಟಿಗಾಗಿ ಉಡುಪುಗಳನ್ನು ಜೋಡಿಸಿಡುತ್ತಿದ್ದಾಗ ನಿಗೂಢತೆಯ ಸುಳಿಗಳಲ್ಲಿ ಅಡಗಿರುವ ಪೆರಿನಾಝ್ ವಾಡಿಯಾಳ ಕಾರ್ಯದರ್ಶಿಯೆಂದು ಹೇಳಿಕೊಂಡ ವ್ಯಕ್ತಿಯಿಂದ ಫೋನು ಬಂತು; ಅದೂ ನನ್ನನ್ನೇ ಕೇಳಿಕೊಂಡು.

'ಫೋನು... ಫೋನು... ಯಾರದು... ವಾಡಿಯಾ... ಪೆರಿನಾಝ್...' ಆಫೀಸು ಕೋಣೆಯಿಂದ ಹಿಡಿದು ಹೊರಗಿನ ಪ್ರದರ್ಶನ ಕೋಣೆಯ ವರೆಗೆ, 'ನಾನು ಹೇಳಲಿಲ್ಲವೇ?' ಎಂದು ಎಲ್ಲರೂ ಒಬ್ಬರನ್ನೊಬ್ಬರು ನೋಡತೊಡಗಿದರು. ವೆರಾನಿ ಫ್ಯಾಶನ್ ಹೌಸಿನ ಮೂಲ ವಿನ್ಯಾಸಕಾರ ಹಾಗೂ ಮಾಲೀಕ ವರುಣ್ ವೆರಾನಿ, ಎರಡು ದಿನಗಳ ಕೆಳಗಷ್ಟೇ ಪ್ಯಾರೀಸಿಗೆ ಹೋಗಿದ್ದ. ಅವನ ಪ್ರಮುಖ ಸಹಾಯಕಿ ನೀಲಿಮಾ ಕೂಡಾ ಆಫೀಸಿನಲ್ಲಿರಲಿಲ್ಲ. ಫೋನು ನನ್ನ ಕೈಗೆ ಬಂತು. ನಾನೆಂದು ಖಂಡಿತವಾದ ಮೇಲೆ ಕಾರ್ಯದರ್ಶಿಯು 'ಪೆರಿನಾಝ್ ವಾಡಿಯಾ' ಎಂದು ಹೇಳಿ ಫೋನು ವರ್ಗಾಯಿಸಿದಳು. ಫೋನಿನಾಚೆ ಕೇಳಿಯೂ ಕೇಳದಂತಿದ್ದ ಕೋಮಲ ದನಿ. ಅವಳಿಗಿಷ್ಟವಾದ ಒಂದೆರಡು ಉಡುಪಿನ ವಿನ್ಯಾಸಗಳ ಬಗ್ಗೆ ಅವಳು ಹೇಳುತ್ತಿದ್ದರೆ, ಮೈಯೆಲ್ಲ ಕಿವಿಯಾಗಿ ಕೇಳಿದೆ. ಮೇಲುವರ್ಗದ ಇಂಗ್ಲೀಷ್ ಮಂದಿಯ ಅಸ್ಖಲಿತ ಇಂಗ್ಲೀಷ್ ಉಚ್ಚಾರ. ಅದಾಗಲೇ ಆಕೆಯ ನಿಗೂಢತೆಯ ಬಗ್ಗೆ ಅಲ್ಲಿ ಇಲ್ಲಿ ಕೇಳುತ್ತಲೇ ಇದ್ದ ನನಗೆ ಬಾಯಿ ಹೊರಡಲಿಲ್ಲ. ಉಡುಪಿನ ಅಳತೆ, ಮಾದರಿಗಳ ಸ್ಪಷ್ಟತೆಗಾಗಿ ಆಕೆಯ ಮನೆಗೆ ಹೋಗಲು ದಿನವೂ ನಿಗದಿತವಾಯಿತು. ಪ್ರದರ್ಶನಕ್ಕೆ ಬಂದ ಗುಟ್ಟಿನ ಅರಿವೂ ಆಯಿತು. ಪ್ಯಾರೀಸಿನಲ್ಲಿ ನಾನು ಕಲಿತ ಫ್ಯಾಶನ್ ವಿನ್ಯಾಸ ಕಾಲೇಜಿನ ಪ್ರಾಧ್ಯಾಪಕ ಹ್ಯೂಬರ್ಟ್ ಡೆಲೋನೆಗೆ ಆಮಂತ್ರಣ ಕಳಿಸಿದ್ದೆ. ಫ್ಯಾಶನ್ ಜಗತ್ತಿನಲ್ಲಿ ದೊಡ್ಡ ಹೆಸರಾಗಿದ್ದ ಆತ ಪೆರಿನಾಝಳಿಗೆ ಕರೆ ಮಾಡಿ ಪ್ರದರ್ಶನಕ್ಕೆ ಹೋಗಬೇಕೆಂದು ಒತ್ತಾಯಿಸಿದ್ದನಂತೆ.

ಪೆರಿನಾಝಳ ಫೋನು ಬಂದುದು ಆಫೀಸಿನಲ್ಲಿ ಒಂದು ತರದ ಮಿಂಚು ಹರಿದಂತಾಗಿತ್ತು. ಎಲ್ಲೋ ಕೇಳಿದ, ಯಾರೋ ಹೇಳಿದ, ಇದ್ದೂ ಇರದಂತಿರುವ ವ್ಯಕ್ತಿಯಿಂದ ಬಂದ ಕರೆ. ಫೋನಿನಲ್ಲಿ ಮಾತನಾಡುತ್ತಿದ್ದಾಗ, ಅಲ್ಲಲ್ಲಿ ಇದ್ದವರು ತಮ್ಮ ಕೆಲಸ ಕೈಯ್ಯಲ್ಲಿ ಇದ್ದಂತೆ ತಟಸ್ಥರಾಗಿ ನಿಂತಿದ್ದರು. ಫೋನು ಕೆಳಗಿಟ್ಟ ಕ್ಷಣ 'ಹೋ...' ಎಂಬ ಒಕ್ಕೊರಲಿನ ಸ್ವರ ಹೊರಟತಲ್ಲದೆ, ಎಲ್ಲರೂ ನನ್ನ ಸುತ್ತ ನೆರೆದರು. 'ಏನಾಗಿದೆ ಇವರಿಗೆ?' ಎಂದು ನನಗೆ ಅಚ್ಚರಿ. 'ಇನ್ನೂ ವಿಚಾರಣೆ ಬಂದದ್ದಷ್ಟೇ. ಈಗಾಗಲೇ ಆರ್ಡರ್ ಕೈಗೆ